4.	1985-86	715.82	715.82	-
5.	1986-87	721.91	721.91	-
6.	1987-88	9652.31	9122.67	529.64
7.	1988-89	641.22	641.22	-
ಒಟ್ಟು		17047.87	16518.23	529.64

ಧಾರವಾಡಕ್ಕೆ ಅಪೆಕ್ಸ್ ಬ್ಯಾಂಕಿನ ಶಾಖೆ

678 - ಶ್ರೀ ಪಿ. ಸಿ. ಸಿದ್ದನಗೌಡರ್ (ಕಲಘಟಗಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಧಾರವಾಡದಲ್ಲಿ ಅಪೆಕ್ಸ್ ಬ್ಯಾಂಕಿನ ಶಾಖೆಯನ್ನು ತೆರೆಯಲಾಗಿದೆಯೇ?*

ಆ) *ತೆರೆಯದಿದ್ದಲ್ಲಿ ಮೇಲ್ಕಂಡ ಜಾಗದಲ್ಲಿ ಅಪೆಕ್ಸ್ ಬ್ಯಾಂಕಿನ ಶಾಖೆಯನ್ನು ತೆರೆಯುವ ವಿಚಾರದ ಸರ್ಕಾರದ ಪರಿಶೀಲನೆಯಲ್ಲಿದೆಯೇ?*

ಶ್ರೀ ಕೆ.ಹೆಚ್. ಪಾಟೀಲ್ (ಸಹಕಾರ ಮಂತ್ರಿಗಳು)

ಅ) ಇಲ್ಲ.

ಆ) ಇಲ್ಲ.

ಕಲಘಟಗಿಗೆ ಪ್ರತ್ಯೇಕ ಎ.ಪಿ.ಎಂ.ಸಿ.

680 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಲಘಟಗಿ ತಾಲ್ಲೂಕಿಗೆ ಪ್ರತ್ಯೇಕ ಎ. ಪಿ. ಎಂ. ಸಿ. ಮಾರುಕಟ್ಟೆಯನ್ನು ಮಂಜೂರು ಮಾಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ?*

ಆ) *ಹಾಗಿದ್ದಲ್ಲಿ ಈ ವಿಷಯದ ಬಗ್ಗೆ ಸರ್ಕಾರ ಇದುವರೆವಿಗೂ ಯಾವ ಕ್ರಮವನ್ನು ಕೈಗೊಂಡಿದೆ?*

ಶ್ರೀ ಕೆ.ಹೆಚ್. ಪಾಟೀಲ್ (ಸಹಕಾರ ಸಚಿವರು)

ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಅಮರಗೋಳ ಮಾರ್ಕೆಟ್‌ಯಾರ್ಡಿನ ನಿರ್ಮಾಣ ಕಾರ್ಯದ ಪ್ರಗತಿ

681 - ಶ್ರೀ ಪಿ.ಸಿ.ಸಿದ್ದನಗೌಡರ್ (ಕಲಘಟಗಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹುಬ್ಬಳ್ಳಿ ತಾಲ್ಲೂಕಿನಲ್ಲಿರುವ ಅಮರಗೋಳದಲ್ಲಿ ಹೊಸ ಮಾರುಕಟ್ಟೆ ಯಾರ್ಡಿನ ನಿರ್ಮಾಣ ಕಾರ್ಯ ಯಾವಾಗ ಪ್ರಾರಂಭವಾಯಿತು. ?*

ಆ) *ಈ ನಿರ್ಮಾಣಕಾರ್ಯಕ್ಕಾಗಿ ಇದುವರೆವಿಗೂ ವೆಚ್ಚವಾದ ಹಣವೆಷ್ಟು?*

ಇ) *ಈ ಮಾರ್ಕೆಟ್ ಯಾರ್ಡ್ ಪೂರ್ಣಗೊಳ್ಳಲು ಇನ್ನೂ ಎಷ್ಟು ಕಾಲಬೇಕು?*

ಈ) *ಹಳೆಯ ಮಾರ್ಕೆಟ್ ಯಾರ್ಡ್‌ನ್ನು ಯಾವಾಗ ಹೊಸ ಮಾರ್ಕೆಟ್ ಯಾರ್ಡಿಗೆ ಸ್ಥಳಾಂತರಿಸಲಾಗುತ್ತಿದೆ.*

ಶ್ರೀ ಕೆ.ಹೆಚ್. ಪಾಟೀಲ್ (ಸಹಕಾರ ಸಚಿವರು)

ಅ) 1986-87ರಲ್ಲಿ ಪ್ರಾರಂಭವಾಯಿತು.

ಆ) ರೂ. 391.40 ಲಕ್ಷಗಳು.